ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಾರಿ ಆಗುವುದಿಲ್ಲ. ಬೇಕಾದರೆ ನಿಮಗೆ convinceಮಾಡುತ್ತೇನೆ. ಅವಕಾಶ ಕೊಡಿ. ನಿಯಮ 69ಕ್ಕೆ convertಮಾಡಿ.

ಅಧ್ಯಕ್ಷರು: ಮಾನ್ಯ ಹೆಚ್.ಡಿ.ರೇವಣ್ಣನವರು ಮತ್ತು ಇತರರು ಗ್ರಾಮಾಂತರ ಪ್ರದೇಶಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಉದ್ದೇಶದಿಂದ ನಿರಂತರ ಜ್ಯೋತಿಯನ್ನು ತರಬೇಕು ಎನ್ನುವುದನ್ನು ನಿಯಮ 60ರಲ್ಲಿ ಈಗಾಗಲೇ ತಂದಿರುತ್ತಾರೆ. ಇದು ಯಾವುದೇ ಸಾರ್ವಜನಿಕ ಮಹತ್ವ ಹಾಗೂ ಇತ್ತೀಚಿನ ಘಟನೆಯಾಗಿರುವುದಿಲ್ಲ. ಇದರಲ್ಲಿ ಈಗಾಗಲೇ ವಿದ್ಯುಚ್ಛಕ್ತಿ ಇಲಾಖೆ ಬೇಡಿಕೆಯಲ್ಲಿ ಇದನ್ನು ಬಹಳ ಸವಿಸ್ತಾರವಾಗಿ ಚರ್ಚೆಗೆ ಅವಕಾಶವಿರುವುದರಿಂದ ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನೀವು ಈ ತರಹ ಮಾಡಿದರೆ ನಾವು ಧರಣಿ ಕೊಡಬೇಕಾಗುತ್ತದೆ. ರಾಜ್ಯದಲ್ಲಿ ಇವತ್ತು ಎರಡು ಗಂಟೆಗಳ ಕಾಲ ವಿದ್ಯುತ್ ಕೊಡುವುದಕ್ಕಾಗುತ್ತಿಲ್ಲ.

ಅಧ್ಯಕ್ಷರು: ಪ್ರತಿಯೊಂದಕ್ಕೂ ಧರಣಿ ಇನ್ನೊಂದು ಎಂದು ಹೇಳಿದರೆ ಸದನ ನಡೆಸುವುದು ಹೇಗೆಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ದಯಮಾಡಿ ಈ ವಿಷಯದ ಗಂಭೀರತೆಯನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು: ಗಂಭೀರತೆಯನ್ನು ಅರ್ಥ ಮಾಡಿಕೊಂಡು ಹೇಳಿದ್ದು, ಡಿಮ್ಯಾಂಡ್ಸ್ ಇದೆಯಲ್ಲ. ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಹೇಗೆ ಆಗುತ್ತದೆ? ಡಿಮ್ಯಾಂಡ್ಸ್‌ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಸರ್ಕಾರದ ಖಜಾನೆಗೆ ನಷ್ಟವಾಗಿದೆ. ದಯಮಾಡಿ ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ.